ಬಾರದಿರಲಿ ಎಂದು ಅವರು ದನಗಾಹಿಗಳ ಜತೆ ರಹಸ್ಯ ಒಪ್ಪಂದ ಮಾಡಿಕೊಂಡಿದ್ದರೆ ಆಶ್ಚರ್ಯವಿಲ್ಲ. ಎಂದೂ ಮುಖಾಮುಖಿಯಾಗದ ದನಗಳು, ತಡವಾಗಿ ಮರಳುವ ದಿನ, ಬಸವೇಶ್ವರ ಟಾಕೀಸಿನ ಎದುರು ಮೆಲುಕು ಹಾಕುತ್ತ ಧರಣಿ ಕೂತಂತೆ ಎದುರಾಗುತ್ತವೆ. ಕೆಳಗಿಳಿದು ಅವಕ್ಕೆ ತಾಗದಂತೆ ಹುಶಾರಾಗಿ ಸ್ಕೂಟರನ್ನು ದಬ್ಬಿಕೊಂಡು ಪಾರಾಗಿ ಬರುತ್ತೇನೆ. ತಮ್ಮ ಹೆಸರಲ್ಲಿ ವಿವಾದ, ಹಲ್ಲೆ, ಕೊಲೆಗಳು ದೇಶದಲ್ಲಿ ನಡೆದಿವೆ ಎಂಬುದು ಅವುಗಳ ಗಮನಕ್ಕೆ ಬಂದಿದೆಯೊ ಇಲ್ಲವೊ? ಬಂದಿದ್ದರೆ ಅವು ಹೀಗೆ ರಸ್ತೆಯ ಮೇಲೆ ನಿರಾಳವಾಗಿ ಮಲಗುತ್ತಿರಲಿಲ್ಲ. ಅಜ್ಞಾನವೂ ಒಂದು ಸುಖ ತಾನೇ?

ದನಗಳೇನೊ ದೊಡ್ಡ ಕಾಲ್ನಡೆಗಳು. ಅವನ್ನು ಕಟ್ಟಲು ಮಾಲೀಕರಿಗೆ ಕೊಟ್ಟಿಗೆಯಿಲ್ಲ ಅಥವಾ ಪುರುಸೊತ್ತಿಲ್ಲ. ಮೇಲಾಗಿ ಅವು ಹಗಲಹೊತ್ತು ರಸ್ತೆಯಲ್ಲಿ ಮಲಗುವುದಿಲ್ಲ. ಆದರೆ ನಾಯಿಗಳು ಹಾಡಹಗಲು ನಡುರೋಡಿನಲ್ಲಿ ಮಲಗುವ ಅಗತ್ಯವಾದರೂ ಏನಿದೆ? ಈ ಭಾಗದ ಹಳ್ಳಿಗಳಲ್ಲಿ ಜನಸಂಖ್ಯೆ ಮೀರಿಸುವಂತೆ ಶ್ವಾನಸಂತತಿಯಿದೆ. ರೌಡಿಗಳಂತೆ ಗುಂಪು ಕಟ್ಟಿಕೊಂಡು ಬೀದಿ ತಿರುಗುವ ಇವು ಕಳ್ಳರನ್ನು ಹಿಡಿದ ಒಂದೇ ನಿದರ್ಶನವಿಲ್ಲ. ಪೊಲೀಸ್ ಠಾಣೆಗಳಿರುವುದರಿಂದ ಕಳ್ಳರ ಕಾಟವೂ ಇಲ್ಲ; ಮೈನ್ಸಿನವರು ಅರಣ್ಯವನ್ನೆಲ್ಲ ನಾಶಮಾಡಿರುವುದರಿಂದ, ಹಿಂದಿನಂತೆ ಬೇಟೆಗಾರರ ಜತೆಗೆ ಅಡವಿಗೆ ಹೋಗುವ ಉದ್ಯೋಗವಿಲ್ಲ. ಮನೆಮನೆ ಮುದ್ದೆ, ಗುಡಿಗುಡಿ ನಿದ್ದೆ! ಕೆಲವಕ್ಕೆ ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಇನ್ನಿಲ್ಲದ ಸೊಕ್ಕು. ರಸ್ತೆಯಲ್ಲಿ ಪ್ರಖ್ಯಾತ ಪ್ರಾಧ್ಯಾಪಕರೂ ವಿದ್ವಾಂಸರೂ ಸಂಚರಿಸುತ್ತಾರೆ ಎಂಬ ಖಬರಿಲ್ಲದೆ, ರಸ್ತೆ ತುಂಬ ನಾಗಾಲು ಚಾಚಿ ಮಲಗುತ್ತವೆ. 'ಇವರು ಕಡಿದು ಕಟ್ಟೆಹಾಕುವುದು ಅಷ್ಟರಲ್ಲೇ ಇದೆ' ಎಂಬ ಉದಾಸೀನ ಅವಕ್ಕೆ. ಬಹುಶಃ ನಮ್ಮ ಬಂಡವಾಳ ಗೊತ್ತಾಗಿರುವ ಹಂಡಬಂಡ ನಾಯಿಯೊಂದು, ಎಲ್ಲೋ ಅಡಗಿಕೊಂಡಿದ್ದು ನನ್ನ ಸ್ಕೂಟರ್ ಆಗಮಿಸುವ ಹೊತ್ತಿಗೆ ಸರಿಯಾಗಿ ಅಡ್ಡಬಂದು ನಿಲ್ಲುವ ಚಾಳಿ ಬೆಳೆಸಿಕೊಂಡಿತ್ತು. ಅದು ಮಲಗಿರುವಾಗ ಹಾರ್ನ್ ಮಾಡಿದರೆ, ಒಂದೇ ಕಣ್ಣನ್ನು ಅರೆ ತೆರೆದು ನೋಡಿ, 'ಬೇಕಾದರೆ ಸರಿದು ಹೋಗು' ಎಂಬಂತೆ ಮತ್ತೆ ಕಣ್ಮುಚ್ಚಿ ನಿದ್ದೆ ಮುಂದುವರೆಸುತ್ತಿತ್ತು. ನಾನು 'ಪಾಪ! ರಾತ್ರಿಯೆಲ್ಲ ಕಾವಲು ಮಾಡಿರಬೇಕು' ಎಂದು ಅನುಸರಿಸಿಕೊಂಡು ಹೋಗುತ್ತಿದ್ದೆ. ಒಮ್ಮೆ 'ದಿನಾ ನಾನೇ ಯಾಕೆ ಸೋಲಬೇಕು' ಎಂಬ ಛಲವುಕ್ಕಿ, ಸ್ಕೂಟರಿನ ಮುಂಗಾಲಿ ಮೈತಾಗುವಂತೆ ನಿಲ್ಲಿಸಿ, ಶಬ್ದ ಮಾಡಿದೆ. ಸಾವಕಾಶದಿಂದ ಎದ್ದು ಸೊಂಟವನ್ನು ಬಾಗಿಸಿ ಕಾಲನ್ನೂ ಹಿಂದಕ್ಕೂ ಮುಂದಕ್ಕೂ ಎಳೆದು ಯೋಗಾಸನಿಯಂತೆ ಮೈಮುರಿದು, ತುಚ್ಛಗಣ್ಣಿನಿಂದ ನನ್ನತ್ತ ನೋಡುತ್ತ ಜಗುಲಿಗೆ ಹೋಗಿ ಮಲಗಿತು. ಜೀವಮಾನದಲ್ಲೇ ನನ್ನನ್ನು ಇಷ್ಟು ಹಗುರವಾಗಿ ಕಂಡವರು ಯಾರೂ ಇದ್ದಂತಿಲ್ಲ.

ಒಮ್ಮೆ ಗೆಳೆಯರೊಬ್ಬರು ರಸ್ತೆಯಲ್ಲಿ ಮಲಗುವ ಅದರ ಅಶಿಸ್ತಿಗೆ ಸರಿಯಾಗಿ ಬುದ್ಧಿ ಕಲಿಸಲು ಬಾಲದ ಮೇಲೆ ಚಕ್ರ ಹತ್ತಿಸಿದರು. ವಾಪಸ್ಸು ಬರುವಾಗ ಅದು ಇಡೀ ಶುನಕ ಸಮುದಾಯವನ್ನು ಒಗ್ಗೂಡಿಸಿ ಅವರ ಮೇಲೆರಗಿತು. ಮುಂದೆಯೂ ಅವರ ಬೈಕು ಸಪ್ಪಳ ಕೇಳಿದರೆ ಸಾಕು ಅಟ್ಟಿಸಿಕೊಂಡು ಹೋಗತೊಡಗಿತು. ಅವರು ಅಂಜಿಕೊಂಡು ವಾಹನ ಬದಲಿಸಿದರು. ಪರಿಣಾಮ ಕಾಣಲಿಲ್ಲ. ಕಡೆಗೆ ಆ ರಸ್ತೆಯಲ್ಲಿ ಹೋಗುವುದನ್ನೇ ಕೈದು ಮಾಡಿಕೊಂಡರು. ಈ ಬಿಡಾಡಿ ನಾಯಿಗಳಿಗೆ ಹೋಲಿಸಿದರೆ ಹಂಪಿರೋಡಿನ ಕೋಳಿಗಳೇ ವಾಸಿ. ರಸ್ತೆ ಬದಿಯಲ್ಲಿ ರೈತರು ಮುತ್ತುರತ್ನಗಳ ರಾಶಿಯಂತೆ ಹಾಕಿರುವ ತಿಪ್ಪೆಗಳನ್ನು ಕೆರೆಕೆರೆದು ಹುಳ ಹುಪ್ಪಟೆಯನ್ನು ಮರಿಗಳಿಗೆ ಉಣಿಸುತ್ತ; ದೊಡ್ಡ ಮುದಿ ಹುಂಜವು ಪ್ರಿಯತಮೆಯರಾದ ಹೆಂಟೆಗಳನ್ನು ಆಡಿಸುತ್ತ, ಹತ್ತಿರ ಸುಳಿಯಲು ಯತ್ನಿಸುವ ಚಿಕ್ಕ ಹುಂಜಗಳನ್ನು ಅಟ್ಟಿಸಾಡುತ್ತ, ತರುಣ ಹುಂಜಗಳು ತಮ್ಮ ಪಾಳಿ ಎಂದು ಬರುವುದೊ ಎಂದು ಹಲ್ಲುಹಲ್ಲು ಕಡಿಯುತ್ತ, ಸಾರ್ವಜನಿಕರಿಗೆ ತೊಂದರೆ ಕೊಡದೆ ತಮ್ಮಷ್ಟಕ್ಕೆ ಬದುಕುವುದನ್ನು ನೋಡಬಹುದು.